ಬರೆಯುತ್ತೇನೆಂದರೆ ಬರೆಯುವುದು ನನ್ನ ಹವ್ಯಾಸ, ನನ್ನ ತೀವ್ರಭಾವ. ಯಾಕೆ ಬರೆಯುತ್ತೇನೆಂದರೆ ನನ್ನನ್ನು ಮರೆತುಬಿಡುತ್ತಾರೆ ಅನ್ನುವ ಭಯ ಇದೆ ಅದಕ್ಕೆ. ಯಾಕೆ ಬರೆಯುತ್ತೇನೆಂದರೆ ಬರವಣಿಗೆ ತರುವ ಕೀರ್ತಿ, ಕುತೂಹಲ ಇಷ್ಟವಿದೆ. ಒಂಟಿಯಾಗಿರಲು ಬರೆಯುತ್ತೇನೆ. ನಿಮ್ಮೆಲ್ಲರ ಬಗ್ಗೆ, ಪ್ರತಿಯೊಬ್ಬರ ಬಗ್ಗೆ ನನಗೆ ಯಾಕೆ ಯಾಕೆ ತುಂಬ ಕೋಪ ಅನ್ನುವುದನ್ನು ತಿಳಿಯಲೂ ಬರೆಯುತ್ತಿರಬಹುದು ನಾನು. ಯಾಕೆ ಬರೆಯುತ್ತೇನೆಂದರೆ ನಾನು ಬರೆದದ್ದನ್ನು ಬೇರೆಯವರು ಓದಬೇಕು. ಯಾಕೆ ಬರೆಯುತ್ತೇನೆಂದರೆ ಕಾದಂಬರಿ, ಪ್ರಬಂಧ, ಒಂದು ಪುಟ ಬರೆದಿದ್ದೇನೆ, ಬರೆದು ಮುಗಿಸಬೇಕು. ಯಾಕೆ ಬರೆಯುತ್ತೇನೆಂದರೆ ನಾನು ಬರೆಯಬೇಕೆಂದು ಎಲ್ಲರೂ ನಿರೀಕ್ಷಿಸುತ್ತಾರೆ. ಯಾಕೆ ಬರೆಯುತ್ತೇನೆಂದರೆ ಲೈಬ್ರರಿಗಳು ಶಾಶ್ವತವೆಂಬ ಬಾಲಿಶ ನಂಬಿಕೆ ಇದೆ, ನನ್ನ ಪುಸ್ತಕಗಳು ಲೈಬ್ರರಿಯ ಶೆಲ್ಫಿನಲ್ಲಿ ಇದ್ದೇ ಇರುತ್ತವೆ ಅನ್ನುವ ಕಲ್ಪನೆ ಇದೆ. ಯಾಕೆ ಬರೆಯುತ್ತೇನೆಂದರೆ ಬದುಕಿನ ಎಲ್ಲ ಚೆಲುವು, ಎಲ್ಲ ಶ್ರೀಮಂತಿಕೆಯನ್ನು ಪದಗಳಾಗಿ ಪರಿವರ್ತಿಸುವುದು ಹುಮ್ಮಸ್ಸು ತರುತ್ತದೆ. ಕಥೆ ಹೇಳುವುದಕ್ಕಿಂತ ಕಥೆ ಕಟ್ಟುವುದು ನನಗಿಷ್ಟವೆಂದು ಬರೆಯುತ್ತೇನೆ. ಯಾಕೆ ಬರೆಯುತ್ತೇನೆಂದರೆ ನಾನು ಹೋಗಲೇಬೇಕಾದ ಜಾಗವೊಂದಿದೆ, ಕನಸಿನಲ್ಲಿ ಆಗುವ ಹಾಗೇ ಅದು ಇದೆ ಅಂತ ಗೊತ್ತಿದ್ದರೂ ಅಲ್ಲಿಗೆ ಹೋಗಲಾಗದಂಥ ಜಾಗ ಅನ್ನುವ ಭಯದಿಂದ ತಪ್ಪಿಸಿಕೊಳ್ಳುವುದಕ್ಕೆ ಬರೆಯುತ್ತೇನೆ. ಸಂತೋಷವಾಗಿರುವುದಕ್ಕೆ ನನಗೆ ಬರಲಿಲ್ಲವೆಂದು ಬರೆಯುತ್ತೇನೆ. ಸಂತೋಷವಾಗಿರುವುದಕ್ಕೆ ಬರೆಯುತ್ತೇನೆ.

ನನ್ನ ಕಚೇರಿಯಲ್ಲಿ ಸೂಟ್‌ಕೇಸು ಇಟ್ಟು ಹೋದ ಒಂದು ವಾರದ ನಂತರ ನಮ್ಮಪ್ಪ ಮತ್ತೆ ಬಂದಿದ್ದರು. ಯಾವಾಗಲೂ ತರುವ ಹಾಗೆ ನನಗೆ ಚಾಕಲೇಟ್ ತಂದಿದ್ದರು. ನಾನು 48 ವರ್ಷ ವಯಸ್ಸಾದವನು ಅನ್ನುವುದನ್ನು ಮರೆತ್ತಿದ್ದರು. ಬದುಕು, ರಾಜಕೀಯ, ಮನೆಯ ವಿಚಾರಗಳ ಬಗ್ಗೆ ಎಂದಿನಂತೆ ನಾವು ಹರಟೆ ಹೊಡೆದು ನಕ್ಕೆವು, ಹೊರಡುವ ಹೊತ್ತು ಬಂತು. ನಮ್ಮಪ್ಪನ ಕಣ್ಣು ಸೂಟ್‌ಕೇಸು ಇಟ್ಟಿದ್ದ ಜಾಗದತ್ತ ತಿರುಗಿದವು. ನಾನು ಸೂಟ್‌ಕೇಸಿನ ಜಾಗ ಬದಲಾಯಿಸಿದ್ದನ್ನು ಗಮನಿಸಿದವು. ಅಪ್ಪನ ಕಣ್ಣು ನಾನು, ನನ್ನ ಕಣ್ಣು ಅಪ್ಪ ನೋಡಿಕೊಂಡೆವು. ಆಮೇಲೆ ಮೌನದ ಒತ್ತು ಹಿಂಬಾಲಿಸಿತು. ಸೂಟ್‌ಕೇಸು ತೆರೆದು ಒಳಗಿದ್ದುದನ್ನು ಓದಿದೆ ಅನ್ನುವುದನ್ನು ಅಪ್ಪನಿಗೆ ಹೇಳಲಿಲ್ಲ. ನೋಟ ತಿರುಗಿಸಿದೆ. ಅಪ್ಪನಿಗೆ ಅರ್ಥವಾಯಿತು. ಅಪ್ಪನಿಗೆ ಅರ್ಥವಾಯಿತು ಅನ್ನುವುದು ನನಗೆ ಅರ್ಥವಾದ ಹಾಗೆಯೇ. ತನಗೆ ಅರ್ಥವಾಯಿತು ಅನ್ನುವುದು ನನಗೆ ಅರ್ಥವಾಯಿತು ಅನ್ನುವುದು ತನಗೆ ಅರ್ಥವಾಯಿತು ಅನ್ನುವುದು ನನಗೆ ಅರ್ಥವಾಯಿತು ಅನ್ನುವ ಹಾಗೆ... ಹೀಗೆ ಅರ್ಥವಾದದ್ದು ಅರ್ಥವಾಗುವ ಕೆಲಸ ಒಂದೆರಡೇ ಕ್ಷಣದಲ್ಲಿ ನಡೆದು ಹೋಯಿತು. ನಮ್ಮಪ್ಪ ಖುಷಿಯ, ತನ್ನಲ್ಲೇ ತನಗೆ ನಂಬಿಕೆ ಇರುವ ಮನುಷ್ಯ. ಯಾವಾಗಲೂ ನಗುವ ಹಾಗೆ ನನ್ನ ನೋಡಿ ನಕ್ಕರು. ಮನೆಯಿಂದ ಹೊರಡುವಾಗ ಅಪ್ಪಂದಿರು ಮಕ್ಕಳಿಗೆ ಹೇಳುವ ಹಾಗೆ ನನ್ನನ್ನು ಉತ್ಸಾಹಗೊಳಿಸುವ ಸುಂದರವಾದ ಮಾತು ಅಪ್ಪ ಹೇಳಿದರು.

ಎಂದಿನ ಹಾಗೆ ಅಪ್ಪನ ಖುಷಿ, ಸ್ವಚ್ಛಂದವಾದ ಜಗ್ಗದ ಕುಗ್ಗದ ಮನೋಧರ್ಮದ ಬಗ್ಗೆ ಅಸೂಯೆ ಪಡುತ್ತಾ ಅವರು ಹೋಗುವುದನ್ನು ನೋಡುತ್ತ ನಿಂತೆ. ಆದರೆ ಆ ದಿನ ನನ್ನ ಮನಸ್ಸಿನೊಳಗೆ ಸಂತೋಷದ ಮಿಂಚೂ ಇತ್ತು ಅನ್ನುವುದನ್ನು ನೆನೆದರೆ ನಾಚಿಕೆಯಾಗುತ್ತದೆ. ನಾನು ನಮ್ಮಪ್ಪನಷ್ಟು ಆರಾಮವಾಗಿ ಬದುಕಲಿಲ್ಲ, ನಮ್ಮಪ್ಪನ ಹಾಗೆ ಬೇಕಾಬಿಟ್ಟಿ ಅಲೆದುಕೊಂಡೋ ಖುಷಿಯಾಗೋ ಬದುಕು ಸಾಗಿಸಲಿಲ್ಲ. ಆದರೆ ನನ್ನ ಬದುಕನ್ನು ಬರವಣಿಗೆಗಾಗಿ ಮೀಸಲಿಟ್ಟೆ... ಮಿಕ್ಕದ್ದೆಲ್ಲ ನಿಮಗೆ ಅರ್ಥವಾಗುತ್ತದೆ. ನಮ್ಮಪ್ಪನನ್ನು ಹೀಗೆ ಮನಸ್ಸಿನಲ್ಲೇ ಕೀಳ್ಗಳೆದು ಹಿಗ್ಗಿದ್ದಕ್ಕೆ